ನೋಡಿ ಅಲ್ಲೇ ಪಕ್ಕದಲ್ಲಿ ಡ್ಯೂಟಿ ನರ್ಸಿನ ಟೇಬಲ್ ಮೇಲಿದ್ದ ಅವನ ರಿಪೋರ್ಟ್‌ಗಳನ್ನು ಕೈಗೆತ್ತಿಕೊಂಡೆ. ಹೆಮರೇಜಾದ ಮಧ್ಯಾಹ್ನ ಅವನನ್ನು ಪರೀಕ್ಷಿಸಿದ ಮೊದಲ ಡಾಕ್ಟರು ಬರೆದುಕೊಟ್ಟ ಚೀಟಿಯಿಂದ ಹಿಡಿದು ಇಂದು ಬೆಳಗ್ಗೆ ಮಾಡಿದ ಎಂ.ಆರ್.ಐ. ಸ್ಕ್ಯಾನ್ ರಿಪೋರ್ಟ್‌ನ ತನಕ ಎಲ್ಲಾ ದಾಖಲಾತಿಗಳೂ ಅದರಲ್ಲಿದ್ದವು. ಸಮಯ ಕಳೆಯಲಿಕ್ಕಾಗಿ ಸುಮ್ಮನೆ ಅದರ ಮೇಲೆ ಓಡುತ್ತಿದ್ದ ನನ್ನ ಕಣ್ಣುಗಳು ಒಂದು ಸಾಲಿನಲ್ಲಿ ಥಟ್ಟನೆ ಸ್ಥಾಪಿತವಾದವು.

ಅದು ಮಾವನನ್ನು ಮೊಟ್ಟಮೊದಲ ಬಾರಿಗೆ ಪರೀಕ್ಷಿಸಿದ ಊರಿನ ಡಾಕ್ಟರು ಬರೆದ ಬಿಪಿ ರೀಡಿಂಗ್. ಅದರಲ್ಲಿ ಅವನ ಬಿಪಿಯನ್ನು ಚುಚ್ಚುಮದ್ದು ನೀಡುವ ಮೊದಲು 190/110 ಹಾಗೂ ಚುಚ್ಚುಮದ್ದು ನೀಡಿದ ಅರ್ಧ ಗಂಟೆಯ ನಂತರ 160/90 ಎಂದೂ ದಾಖಲಿಸಲಾಗಿತ್ತು. ಆದರೆ, ಅದಾಗಿ ಒಂದೇ ಒಂದು ಗಂಟೆಯ ಬಳಿಕ, ಸಂಜೀವನ ಆಸ್ಪತ್ರೆಯ ಕ್ಯಾಸ್ಯುಯಲ್ಟಿ ಡಾಕ್ಟರು ಮಾಡಿದ ಪರೀಕ್ಷೆಯಲ್ಲಿ ಅದರ ಪ್ರಮಾಣ 220/120 ಎಂದಿತ್ತು.

ಚುಚ್ಚುಮದ್ದು ನೀಡಿ ನಿಯಂತ್ರಣಕ್ಕೆ ಬಂದಿದ್ದ ಬಿಪಿ ಅಷ್ಟು ಬೇಗ ಇಷ್ಟು ಏರಿದ್ದಾದರೂ ಏಕೆ?

"ಚುಚ್ಚುಮದ್ದು ನೀಡಿದ ಬಳಿಕವೂ ಬಿಪಿ ನಿಯಂತ್ರಣಕ್ಕೆ ಬರಲಿಲ್ಲವಾದ್ದರಿಂದ ದೊಡ್ಡಾಸ್ಪತ್ರೆಗೆ ಸೇರಿಸಿದೆವು."

ನಾರಾಯಣ ಮಾವನ ತಮ್ಮ ಹೇಳಿದ ಈ ಮಾತುಗಳ ಮೇಲೆ ನನಗೆ ಮೊದಲ ಬಾರಿಗೆ ಅನುಮಾನವುಂಟಾಯ್ತು. ಘಟಿಸಿದ ಅಸಹಜದ ಹಿಂದೆ ಮತ್ತೊಂದು ಅಸಹಜ ಅಡಗಿಲ್ಲ ತಾನೇ? ಒಮ್ಮೆ ಇಳಿದ ರಕ್ತದೊತ್ತಡ ಮತ್ತೆ ಹೆಚ್ಚಾಗುವಂತೆ ಯಾರೋ ಏನೋ ಮಾಡಿಲ್ಲ ತಾನೇ?

ಗಡ್ಡ ನೀವಿಕೊಳ್ಳುತ್ತಾ ಯೋಚಿಸಿದೆ.

★★★

"ಅನಾಹುತಗಳ ಸಾಲಿನಲ್ಲಿ ಯಾವುದು ಸಹಜ? ಯಾವುದು ಅಸಹಜ ಶರತ್? ಆ ಕ್ಷಣಕ್ಕೆ ಊರಿನ ಡಾಕ್ಟರು ನೀಡಿದ ಮೆಡಿಸಿನ್‌ಗೆ ನಿಯಂತ್ರಣಕ್ಕೆ ಬಂದ ಬಿಪಿ ಸ್ವಲ್ಪ ಇಳಿದಿರಬಹುದು. ಬಳಿಕ ಮತ್ತೆ ಹೆಚ್ಚಿರಬಹುದಲ್ಲಾ?"

ಮಂದಾರ ಆಡಿದ ಆ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾನು ನಾರಾಯಣ ಮಾವನ ತಮ್ಮನಾದ ಮಾಧವ ಮಾವನ ಮನೆಯನ್ನು ಹೊಕ್ಕೆ. ಅಲ್ಲಿನ ಜಗುಲಿಗೆ ಹೋಗುತ್ತಿದ್ದಂತೆಯೇ ಅರೆ ಕ್ಷಣ ಮೈ ಕಂಪಿಸಿತು. ಇಲ್ಲೇ... ಒಂದು ವಾರದ ಕೆಳಗೆ ನಾಣಿ ಮಾವ ಮಲಗಿದ್ದು, ಇಲ್ಲೇ ಅವನನ್ನು ಹೆಮರೇಜ್ ಆಕ್ರಮಿಸಿದ್ದು ಎಂಬ ಕಲ್ಪನೆಗೇ ಮೈ ಝುಂ ಎಂದಿತು.

"ಇಲ್ಲವಲ್ಲ ಶರತ್. ಊರಿನ ಡಾಕ್ಟ್ರು ಇಂಜಕ್ಷನ್ ಕೊಟ್ಟ ಮೇಲೂ ಬಿಪಿ ಕಂಟ್ರೋಲ್‌ಗೆ ಬರಲೇ ಇಲ್ಲ. ಅದಕ್ಕೇ ಅಲ್ವಾ ಪಟ್ಟಣಕ್ಕೆ ಕರೆದೊಯ್ದಿದ್ದು?"

ಮೂತಿ ಕೊಂಕಿಸುತ್ತಲೇ ನುಡಿದರು ಮಾಧವ ಮಾವನ ಹೆಂಡತಿ ರುಕ್ಮಿಣಿ ಅತ್ತೆ. ಅವರ ಮುಖದಲ್ಲಿ ಸೂಕ್ಷ್ಮವಾಗಿ ಬಂದು ಹೋದ ಆತಂಕವನ್ನು ನನ್ನ ಕಣ್ಣು ಸ್ಪಷ್ಟವಾಗಿ ಗುರುತಿಸಿತು. ಮಾಧವ ಮಾವನಾದರೂ ಏನೂ ಹೇಳದೆ ಸುಮ್ಮನಿದ್ದ. ರೆಕಾರ್ಡಿನಲ್ಲಿದ್ದ ದಾಖಲೆಗೂ ಇವರ ಮಾತಿಗೂ ತಾಳೆಯಾಗುತ್ತಿಲ್ಲ ಎಂದಾದರೆ ಎರಡರಲ್ಲೊಂದು ತಪ್ಪಾಗಿರಬೇಕು. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ದಾಖಲೆ ತಪ್ಪಾಗಿರಲಿಕ್ಕೆ ಸಾಧ್ಯವಿಲ್ಲ. ಅಂದಮೇಲೆ ಇವರ ಮಾತು...

ನಾರಾಯಣ ಮಾವನಿಗೂ, ಇವರಿಗೂ ಇರುವ ವೈಮನಸ್ಸು ನನಗೆ ತಿಳಿಯದ ಸುದ್ದಿಯೇನೂ ಆಗಿರಲಿಲ್ಲ. ಒಬ್ಬರ ಮನೆಗೊಬ್ಬರು ಬಂದೂ ಹೋಗೀ ಮಾಡುತ್ತಿದ್ದರಾದರೂ ಅದಕ್ಕೆ ಆತ್ಮೀಯತೆಗಿಂತ ಹೆಚ್ಚಿಗೆ ಅನಿವಾರ್ಯತೆ ಕಾರಣವಾಗಿರುತ್ತಿತ್ತು. ಆದರೆ, ತೀರಾ ಅವನ ಪ್ರಾಣಕ್ಕೇ ಕುತ್ತು ತರುವಷ್ಟು ದ್ವೇಷ ಇವರೊಳಗಿದೆಯೇ? ಅಥವಾ ನಾನೇ ಅನವಶ್ಯಕವಾಗಿ ಏನೇನೋ ಯೋಚಿಸುತ್ತಿದ್ದೇನೆಯೇ?